C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌ಃ 88/2025

**ಚಾ.ಸಾ.–03 ಪ್ರಾ.ಸಾ.–03**

| | |
|---|---|
| **ಸಾಕ್ಷಿದಾರರ ಹೆಸರು** | **ಸಿದ್ದರಾಜು** |
| **ತಂದೆಯ ಹೆಸರು** | **ದೊಡ್ಡಯ್ಯ** |
| **ವಯಸ್ಸು** | **36 ವರ್ಷಗಳು** |
| **ಉದ್ಯೋಗ** | **ಕೂಲಿ ಕೆಲಸ** |
| **ವಾಸ** | **ಗೊರವನಹಳ್ಳಿ ಗ್ರಾಮ** |

**ದಿನಾಂಕಃ 04.04.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಚಾಸಾ- 1 ಮತ್ತು 2 ರವರ ಪರಿಚಯ ನನಗೆ ಇದೆ. ನಾವು ಪರಿಶಿಷ್ಟ ಜಾತಿಗೆ ಸೇರಿದವರು. ಚಾಸಾ- 4, 5, 6, 7, 8, 9, 10, 11, 12, 13, 14 ರವರ ಪರಿಚಯ ನನಗೆ ಇದೆ. ಅವರು ನಮ್ಮ ಊರಿನವರು.

2. ಈ ದಿನ ನ್ಯಾಯಾಲಯದ ಮುಂದಿರುವ 1 ರಿಂದ 4ನೇ ಆರೋಪಿತರ ಪರಿಚಯ ನನಗೆ ಇದೆ. (Witness identified accused Nos. 1 to 4 in the dock). ಅವರು ನಮ್ಮ ಊರಿನವರು. ಅವರು ಒಕ್ಕಲಿಗ ಜಾತಿಗೆ ಸೇರಿದವರು.

3. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಚಾಸಾ- 1 ರವರಿಗೂ ಆರೋಪಿತರ ಮಧ್ಯೆ ಯಾವುದೇ ಗಲಾಟೆ ಆಗಿರುವುದಿಲ್ಲ, ಆರೋಪಿತರು ನಮ್ಮನ್ನು ಜಾತಿ ನಿಂದನೆ ಮಾಡಿ ಹಲ್ಲೆ ಮಾಡಿರುವುದಿಲ್ಲ, ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ನಾವು ಯಾವುದೇ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ. ಆರೋಪಿತರ ವಿರುದ್ಧ ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ನೀಡಿರುವುದಿಲ್ಲ.

4. ನನಗೆ ಈಗ ತೋರಿಸಿದ ಗೊದಮಟ್ಟೆ ಯಾವುದೆಂದು ನನಗೆ ಗೊತ್ತಿಲ್ಲ ನನಗೆ ಈಗ ತೋರಿಸಿದ ಶರ್ಟು, ಪ್ಯಾಂಟು ಮತ್ತು ಬನಿಯನ್ ಯಾರದೆಂದು ನನಗೆ ಗೊತ್ತಿಲ್ಲ. ನನಗೆ ಈಗ ತೋರಿಸಿದ ಮಚ್ಚು/ಲಾಂಗನ್ನು ನಾನು ಈ ಹಿಂದೆ ನೋಡಿರುವುದಿಲ್ಲ ಅದನ್ನು ಪೋಲೀಸರಿಗೆ ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣಕ್ಕೂ ಸದರಿ ಆಯುಧಕ್ಕೂ ಏನು ಸಂಬಂದ ಎಂದು ನನಗೆ ಗೊತ್ತಿಲ್ಲ. ನನಗೆ ಈಗ ತೋರಿಸಿದ ಪೋಟೋದಲ್ಲಿರುವ ಕೆಎ–11–ಇವಿ–4330 ಬೈಕು ಯಾರದು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

5. ದಿಃ21.03.2025 ರಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ19.03.2025 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ನಾನು ರೋಡಿನಲ್ಲಿ ನಿಂತಿದ್ದಾಗ 1 ಮತ್ತು 2 ನೇ ಆರೋಪಿತರು ಚಾಸಾ- 1 ರವರನ್ನು ಬೈಕಿನ ಮದ್ಯೆ ಕೂರಿಸಿಕೊಂಡು ಹೋಗುತ್ತಿದ್ದರು ನಾನು ಬೈಕ್ ಹಿಂದೆ ಓಡಿಹೋಗಿ ನನ್ನ ಮೊಬೈಲ್ ಪೋನ್ ಟಾರ್ಚ್ ಆನ್ ಮಾಡಿ ನೋಡಿದೆ ಎಂದರೆ ಸರಿಯಲ್ಲ. ಆ ಸಮಯ 1 ಮತ್ತು 2ನೇ ಆರೋಪಿತರು ಚಾಸಾ- 1 ರವರನ್ನು ಕೆಮ್ಮಣ್ಣು ಕಾಲುವೆ ಪಕ್ಕ ತೆಂಗಿನ ತೋಟದಲ್ಲಿ ಕೂರಿಸಿದ್ದು ಚಾಸಾ- 1 ರವರ ಕೈಯಲ್ಲಿ ರಕ್ತಗಾಯ ಆಗಿದ್ದು ನಂತರ 3 ಮತ್ತು 4ನೇ ಆರೋಪಿತರು ಅಲ್ಲಿಗೆ ಬಂದು ಚಾಸಾ- 1 ರವರನ್ನು ಜಾತಿ ನಿಂದನೆ ಮಾಡಿ ಮೈಮೇಲೆಲ್ಲಾ ಹೊಡೆಯುತ್ತಿದ್ದರು ಎಂದರೆ ಸರಿಯಲ್ಲ. ಗಲಾಟೆ ವಿಚಾರವಾಗಿ ಪೋಲೀಸರಿಗೆ ದೂರು ನೀಡಿದರೆ ನಿಮ್ಮ ಕುಟುಂಬವನ್ನೆಲ್ಲಾ ಪೆಟ್ರೋಲ್ ಹಾಕಿ ಸುಟ್ಟು ದಹನ ಮಾಡುತ್ತೇವೆ ಎಂದು ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಆಗ 1ನೇ ಆರೋಪಿ ನನ್ನ ಬಳಿ ಬಂದು ವೀಡಿಯೋ ಮಾಡುತ್ತಿದ್ದೀಯಾ ಎಂದು ನನ್ನ ಮೊಬೈಲ್ ಫೋನ್ ಕಿತ್ತುಕೊಂಡು ನ್ಯಾಯಾಲಯದ ಮುಂದಿರುವ ಲಾಂಗನ್ನು ನನ್ನಹೊಟ್ಟೆಗೆ ಇಟ್ಟು ಇಲ್ಲಿ ನಡೆದ ವಿಚಾರವನ್ನು ಯಾರಿಗೂ ಹೇಳಬೇಡ ಎಂದು ಬೆದರಿಸಿ ಲಾಂಗನ್ನು ಚಪ್ಪಟೆ ಮಾಡಿಕೊಂಡು ನನ್ನ ಎಡತೊಡೆಗೆ ಹೊಡೆದರು ಎಂದರೆ ಸರಿಯಲ್ಲ. ನಂತರ ಜನರು ಬರುವುದನ್ನು ನೋಡಿ ಲಾಂಗು ಮತ್ತು ಗೊದಮಟ್ಟೆಯನ್ನು ಅಲ್ಲಿಯೇ

ಬಿಸಾಡಿ ಅವರು ಬಂದ ಬೈಕಿನಲ್ಲಿ ಹೊರಟುಹೋದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. **"**ಮೊನ್ನೆ ದಿನ ................... ................... ................... ................... .............. ... ................. ಆಸ್ಪತ್ರೆಗೆ ಕರೆದುಕೊಂಡು ಹೋದರು." ಎಂಬ ಹೇಳಿಕೆಯನ್ನು ಪೊಲೀಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಪಿ.9** ಎಂದು ಗುರುತಿಸಲಾಯಿತು.

6. ಆರೋಪಿತರ ಜೊತೆ ನಾನು ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾವು ಒಂದೇ ಊರಿನವರು ಒಬ್ಬರಿಗೊಬ್ಬರು ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ಆದಕಾರಣ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್.ಡಿ.ಆರ್ ವಕೀಲರಿಂದ**: ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**